‘.......’

‘ತಡೀರಿ ಮಾವ, ಬಿಸಿಬಿಸಿಯಾಗಿ ಇನ್ನೊಂದ್ಲೋಟ ಕಾಫಿ ತಂದ್ಕೊಡ್ತೀನಿ. ಸ್ವಲ್ಪ ಸಮಾಧಾನ ಆಗುತ್ತೆ’.

ಶೀಲಾ ಒಳಗೆ ಹೋದ ಮೇಲೂ ಚಿದಾನಂದ ತಲೆಗೆ ಕೈಹೊತ್ತು ಅಲ್ಲಿಯೇ ಕುಳಿತಿದ್ದ.

* * *

ಮನೆ ಬಿಟ್ಟು ಹೋದ ಮಗಳು ಮರೆತೇ ಹೋದಂತಾಗಿದ್ದಾಳೆ. ಸುಳಿವೇ ಗೊತ್ತಿಲ್ಲದೆ, ಗೊತ್ತಾಗುವ ಮಾರ್ಗ ಕಾಣದೆ ನೆನಪಿನಿಂದ ಮಾಸಿ ಹೋಗಿದ್ದಾಳೆ. ಬದುಕಿದ್ದರೆ ಅವಳ ಬದುಕು ಕಟ್ಟಿಕೊಂಡಿದ್ದಾಳೆ. ಸತ್ತಿದ್ದರೆ ಎಲ್ಲಾ ಮುಗಿದು ಹೋಗಿರುತ್ತದೆ. ತನ್ನ ಮುಂದಿನ ಬದುಕು, ಅದು ಎಷ್ಟೇ ಅಲ್ಪಾವಧಿಯದಾಗಿದ್ದರೂ, ಮಗನ ಸಂಸಾರದ ಜೊತೆ ಮುಂದುವರಿಯಬೇಕೇ ವಿನಃ ಮಗಳಿಂದ ಯಾವ ನಿರೀಕ್ಷೆಯೂ ಇಲ್ಲ. ಚಿನ್ನದಂತಹ ಸೊಸೆ, ಚಿನ್ನದಂತಹ ಮೊಮ್ಮಗ, ನೆಮ್ಮದಿಗೆ ಯಾವ ಭಂಗ ಬರುವುದಕ್ಕೂ ಸಾಧ್ಯತೆಯಿಲ್ಲದ ಸುಖ ಸಂಸಾರ. ಯಾರು ಹೆಚ್ಚು ತನಗೆ? ಮಾತು ಮೀರಿ ಅದೆಷ್ಟೋ ವರ್ಷಗಳಿಂದ ಕಣ್ಮರೆಯಾಗಿರುವ ಮಗಳೋ, ಕಣ್ಣೆದುರಿಗಿರುವ ಮಗನೋ? ಒಬ್ಬ ತಾಯಿಯಾಗಿ ಸೊಸೆ ತನ್ನ ಮಗನ ಬಗ್ಗೆ ಹೀಗೆ ಯೋಚಿಸುವುದು ತಪ್ಪೇನಲ್ಲ. ಮಾತೃಹೃದಯಕ್ಕೆ ಆತಂಕ ಅನ್ನುವುದು ಸ್ವಭಾವ ಸಹಜ. ಮಗಳು ಬದುಕಿದ್ದಾಳೆ ಎಂದಿಟ್ಟುಕೊಂಡರೂ ಅವಳ ಸಂಸಾರ ಹೇಗೋ ನಡೆಯುತ್ತಿರುತ್ತದೆ. ಇದುವರೆಗೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳದವಳು ಅಪ್ಪ ಸತ್ತ ಮೇಲೆ ಆಸ್ತಿಯಲ್ಲಿ ಪಾಲು ಕೇಳಿಕೊಂಡು ಬರಬಹುದೆನ್ನುವ ಸೊಸೆಯ ಊಹೆ ಬಹುಮಟ್ಟಿಗೆ ಉತ್ಪ್ರೇಕ್ಷೆಯೇ ಇರಬಹುದು. ಆದರೆ ಅವಳಿಗೆ ಚಿಂತೆಯಿರುವುದು ಸ್ವಾಭಾವಿಕ. ಅವಳ ಸ್ಥಾನದಲ್ಲಿ ಯಾರಿದ್ದರೂ ಹೀಗಾಗುತ್ತಿತ್ತೇನೋ. ಈ ಕಾಲದಲ್ಲಿ ಯಾತಕ್ಕೂ ಸಾಲದ ಗಂಡನ ದುಡಿಮೆ, ಕರಗಿ ಹೋಗಿರುವ ತನ್ನ ಗಂಟು, ಇರುವುದೆಲ್ಲಾ ಬಾಡಿಗೆ ಬರುವ ಎರಡು ಮನೆಗಳು. ಸೊಸೆ ಹೇಳಿದಂತೆ ನಾಳೆ ಮೊಮ್ಮಗ ಕೂಡ ಮಗನ ಹಾಗೆ ಜೀವನದ ಪಂದ್ಯದಲ್ಲಿ ಹಿಂದುಳಿದುಬಿಟ್ಟರೆ? ಹೊಟ್ಟೆಬಟ್ಟೆಗೂ ಪರದಾಡುವಂತಹ ಪರಿಸ್ಥಿತಿ ಬಂದರೆ? ಆ ಪರಿಸ್ಥಿತಿಯ ನೆನವರಿಕೆ ಮಾತ್ರದಿಂದಲೇ ಕರುಳು ಕಿವುಚುವಷ್ಟು ಸಂಕಟವಾಗುತ್ತದೆ ಚಿದಾನಂದನಿಗೆ.

ಎಳೆ ಮಗುವಾಗಿದ್ದಾಗಿನಿಂದಲೂ ಎತ್ತಿ ಆಡಿಸಿದ ಮೋಹ, ಕೈ ತುತ್ತು ತಿನಿಸಿದ ಮೋಹ, ಬಳಿ ಮಲಗಿಸಿಕೊಂಡು ಚುಕ್ಕು ತಟ್ಟುತ್ತಾ, ಕತೆ ಹೇಳುತ್ತಾ, ಮುದ್ದಾಡಿದ ಮೋಹ, ಮಕ್ಕಳಿಗಿಂಥ ಮೊಮ್ಮಕ್ಕಳ ಮೇಲೆ ಪ್ರೀತಿ ಹೆಚ್ಚಿರುತ್ತದೆ ಅನ್ನುವುದು ಲೋಕಾರೂಢಿಯ ಮಾತು. ಗೌತಮ ಅಂದರೆ ತನ್ನ ಮತ್ತೊಂದು ಪ್ರಾಣ. ಅವನ ಕೂದಲು ಕೊಂಕಿದರೂ ತನ್ನೆದೆ ಬೆಂದು ಹೋಗುತ್ತದೆ. ಎಲ್ಲೋ ಇದ್ದಿರಬಹುದಾದ ಮಗಳು, ಮೊಮ್ಮಕ್ಕಳಿಗಿಂತ ದಿನದಿನವೂ ಕಣ್ಣೆದುರು ಸುಳಿದಾಡಿಕೊಂಡಿರುವವನು ಹೆಚ್ಚು ಪ್ರೀತ್ಯಾಸ್ಪದ ಅನಿಸಿದರೆ ಆಶ್ಚರ್ಯವೇನಿದೆ? ಚಿದಾನಂದ ಸಾಧಕ ಬಾಧಕಗಳನ್ನೆಲ್ಲಾ ಯೋಚಿಸಿ ದಣಿಯುತ್ತಿದ್ದ. ತನ್ನಲ್ಲಿ ರೂಪುಗೊಳ್ಳುತ್ತಿರುವ ನಿರ್ಧಾರವನ್ನು ಕಾರ್ಯರೂಪಕ್ಕೆ ತಂದರೆ ಹೆತ್ತ ಮಗಳಿಗೆ ಮೋಸ ಮಾಡಿದಂತಾಗುವುದಿಲ್ಲವೇ ಎನ್ನುವ ಪಾಪಪ್ರಜ್ಞೆ, ಹಗಲಿರುಳೂ ದಹಿಸುತ್ತಿತ್ತು. ಏನೇ ಆದರೂ ತನ್ನನ್ನು ಕಣ್ಮಣಿಯಂತೆ ಜೋಪಾನ ಮಾಡುತ್ತಿರುವ ಸೊಸೆಯ ಹಿತಾಸಕ್ತಿ ತನಗೆ ಮುಖ್ಯ. ಅವಳ ಸೇವೆಗೆ ಬೆಲೆ ಕಟ್ಟಲಾಗದಿದ್ದರೂ ಕೊನೇಪಕ್ಷ ಅವಳು ಚಿಂತೆಗೀಡಾಗದಂತೆ ಅವಳನ್ನು ಸಂತೋಷವಾಗಿಟ್ಟುಕೊಳ್ಳುವುದು ತನ್ನ ಕರ್ತವ್ಯ. ಮನುಷ್ಯತ್ವ. ಅವೆಷ್ಟೋ ದಿನಗಳ ಚಿಂತನ ಮಂಥನಗಳಿಂದ ಚಿದಾನಂದ ತನ್ನ ನಿರ್ಧಾರವನ್ನು ಗಟ್ಟಿಗೊಳಿಸಿಕೊಂಡ. ಸೊಸೆಯ ದ್ವಂದ್ವಕ್ಕೆ ಮಂಗಳ ಹಾಡಿ ಅವಳ ಮುಖದಲ್ಲಿ ಮೂಡುವ ಸಂತಸವನ್ನು ಕಣ್ತುಂಬಿಕೊಳ್ಳಲು ತೀರ್ಮಾನಿಸಿದ. ನಮ್ಮವರು ಅಂದರೆ ಯಾರು? ನಮ್ಮ ಕಷ್ಟಸುಖಗಳಲ್ಲಿ ಜೊತೆಯಾಗಿ ನಿಲ್ಲುವವರು. ರಕ್ತಸಂಬಂಧಕ್ಕಿಂತ ಮಿಗಿಲಾದದ್ದು ವಿಶ್ವಾಸದ ಬಂಧ. ಎಲ್ಲಕ್ಕಿಂತ ಮಿಗಿಲಾಗಿ ಮೊಮ್ಮಗನ ಬಗೆಗಿನ ಅತಿ ಮೋಹ, ಕಾಳಜಿ ಇಲ್ಲಿ ಕೆಲಸ ಮಾಡಿತ್ತು. ಚಿದಾನಂದ ತನ್ನ ಸ್ವಯಾರ್ಜಿತ ಆಸ್ತಿಯನ್ನು ಮಗ ಭಾರ್ಗವನ ಹೆಸರಿಗೆ ದಾನಪತ್ರ ಮಾಡಲು ಹೃತ್ಪೂರ್ವಕವಾಗಿ ಸಿದ್ಧನಾದ ಅನ್ನುವಲ್ಲಿಗೆ ಅವನ ಜೀವನದ ದಿಕ್ಕು ಮತ್ತೊಂದು ತಿರುವಿಗೆ ಹೊರಳಿಕೊಂಡಿತು.

* * *

ಮನುಷ್ಯ ಅಂದಮೇಲೆ ಸದಾ ಒಂದೇ ರೀತಿ ಇರಲು ಸಾಧ್ಯವೇ? ವಯಸ್ಸು ಹೆಚ್ಚುತ್ತಾ ಬರುತ್ತಿತ್ತು ಚಿದಾನಂದನಿಗೆ. ಇದರೊಂದಿಗೆ ಅವನಿಗೇ ಅರಿವಾಗದಂತೆ, ಅವನಿಗೇ ನಂಬಿಕೆಯಾಗದಂತೆ, ಮನೆಯವರು ಬೆಟ್ಟು ಮಾಡಿ ತೋರಿಸುವಂತೆ ಮತ್ತೊಂದು ಬೆಳವಣಿಗೆ ಅವನನ್ನು ಹಿಡಿತಕ್ಕೆ ತೆಗೆದುಕೊಳ್ಳತೊಡಗಿತ್ತು. ಸೊಸೆ ಹೇಳಿದರೂ, ಮಗ ಹೇಳಿದರೂ, ಮೊಮ್ಮಗ ಹೇಳಿದರೂ ಅವನಿಗೆ ನಂಬಿಕೆಯಿಲ್ಲ. ಎಲ್ಲಾ ಸೇರಿಕೊಂಡು ತನ್ನನ್ನು ಮೂರ್ಖನನ್ನಾಗಿಸುತ್ತಿದ್ದಾರೆ ಎನ್ನುವ ಅನುಮಾನ. ಬೆಳಿಗ್ಗೆ ಏಳುತ್ತಿದ್ದಂತೆ ಶುರುವಾಗುತ್ತದೆ ರಗಳೆ ಎಂದು ಸೊಸೆಯ ದೂರು. ಒಂದು ಪ್ರಶ್ನೆಗೆ ಉತ್ತರ ಕೊಟ್ಟರೆ ನಾಲಿಗೆ ಸವೆದು ಹೋಗುತ್ತದೆಯೇ ಎಂದು ಚಿದಾನಂದನ ಪ್ರತಿ ದೂರು. ಎಷ್ಟೊಂದು ಮಾತಾಡುತ್ತಿದ್ದಳು ಶೀಲಾ. ಎಷ್ಟು ಮಾತಾಡಿದರೂ ಇನ್ನೂ ಏನಾದರೂ ಸರಕು ಉಳಿದುಕೊಂಡಿರುವುದನ್ನು ನೋಡಿ ಮಾವ, ಸೊಸೆ ಅಚ್ಚರಿಪಡುತ್ತಿದ್ದುದಿತ್ತು. ತನ್ನ ಮಕ್ಕಳ ಜೊತೆ ಕೂಡ ಚಿದಾನಂದ ಇಷ್ಟು ಮಾತಾಡಿದವನಲ್ಲ. ಅಂಥ ಸೊಸೆ ಈಗ ಅವನಾಗಿ ಮಾತಾಡಿಸಿಕೊಂಡು ಹೋದರೂ ಮುಖ ತಿರುಗಿಸುತ್ತಾಳೆ.

‘ಏನು ಹೇಳಿದ್ರೂ ನಿಮಗೆ ಅರ್ಥವಾಗಲ್ಲ ಮಾವ, ಕೇಳಿದ್ದೇ ಕೇಳಿ ನನ್ನ ತಲೆ ತಿಂತೀರಿ’ ಅನ್ನುತ್ತಾಳೆ.

‘ಹೌದಪ್ಪಾ, ವಯಸ್ಸಾಗುತ್ತಿದೆ. ಮರೆವು ಬರುತ್ತಿದೆ. ಇವತ್ತು ಯಾವ ವಾರ ಎಂದು ಕೇಳಬಾರದೇ? ಯಾವ ತಿಂಗಳು? ಎಷ್ಟನೇ ತಾರೀಕು?’ ಎಂದು ಅವತ್ತಿನ ಪೇಪರು ಕೈಲಿ ಹಿಡಿದುಕೊಂಡು ಮಾವ ಈ ಪ್ರಶ್ನೆ ಕೇಳಿದರೆ ಶೀಲಾಳಿಗೆ ಬಿ.ಪಿ. ಏರುವುದು ಸಹಜವೇ ಇರಬಹುದು. ಆದರೆ ಪೇಪರಿನಲ್ಲಿ ತನ್ನ ಪ್ರಶ್ನೆಗಳಿಗೆ ಉತ್ತರ ಇರುತ್ತದೆ ಎಂದು ತಲೆಗೆ ಹೊಳೆಯಬೇಕಲ್ಲ? ಯಾಕೋ ಮರೆತೇ ಹೋಗಿರುತ್ತದೆ. ಮುದುಕ ಕೇಳುತ್ತಿದ್ದಾನೆ ಎನ್ನುವ ಮರ್ಯಾದೆ ಕೊಟ್ಟು ಒಂದು ಸಾಲಿನ ಉತ್ತರ ಕೊಡದಿರುವಷ್ಟು ಧಿಮಾಕು? ಸೊಕ್ಕು?

‘ಒಂದು ಸಲ ಅಲ್ಲ, ಎರಡು ಸಲ ಅಲ್ಲ, ಮೂರು ಸಲ ಕೇಳಿದ್ರೂ ಹೇಳ್ತೀನಿ ಮಾವ. ಆದರೆ ಉತ್ತರ ಹೇಳಿ ಬಾಯಿ ಮುಚ್ಚೋದ್ರೊಳಗೆ ಮತ್ತೆ ಅದನ್ನೇ ಕೇಳ್ತೀರಿ. ಈಗಾಗ್ಲೇ ಹತ್ತು ಸಲ ಕೇಳಿದ್ದೇ ಕೇಳಿದೀರಿ. ಉತ್ತರ ಬೇಕು ಅನ್ನೋದಕ್ಕಿಂತ ಯಾವ ಪ್ರಶ್ನೆ ಕೇಳೋದು ಅನ್ನೋದರ ಕಡೆನೇ ನಿಮ್ಮ ತಲೆ ಓಡ್ತಿರುತ್ತೆ’ ಅಸಹನೆಯಿಂದ ಹೇಳುತ್ತಾಳೆ ಶೀಲಾ.

‘ಲೆಕ್ಕ ಇಟ್ಟಿದೀಯಾ?’

‘ಹೌದು ಅಂದ್ಕೊಳ್ಳಿ’.

ಇಷ್ಟಕ್ಕೆ ಮುಗಿಯುವುದಿಲ್ಲ ಜಟಾಪಟಿ.

‘ಹೌದೇನೋ ಪುಟ್ಟಾ? ನಾನು ಹತ್ತು ಸಲ ಇವತ್ತು ಯಾವ ವಾರ ಅಂತ ಕೇಳಿದೀನಾ?’

‘ಹೌದು ಅಜ್ಜ’

ಪಿತ್ತ ಕೆರಳುತ್ತದೆ ಚಿದಾನಂದನಿಗೆ. ಮಗ ಅಲ್ಲಿದ್ದರೆ ಅವನ ಉತ್ತರ ಕೂಡ ಇದೇ.

‘ಪ್ಲೀಸ್ ಮಾವ, ಪ್ರಶ್ನೆ ಕೇಳೋದೊಂದು ಬಿಟ್ಬಿಡಿ. ಅದೊಂದು ಬಿಟ್ರೆ ನೀವು ನಾರ್ಮಲ್’.

‘ಅಂದ್ರೆ? ನಾನು ಸರಿಯಾಗಿಲ್ಲ ಅಂತಾನಾ?’

‘ನನ್ನ ಬಾಯಲ್ಲಿ ಹೇಳಿಸ್ಬೇಡಿ...’

ಬಾಡಿಗೆ ಮನೆಯವರು ಕೆಳಗಿಳಿದು ಬರುವಾಗ ಕಣ್ಣಿಗೆ ಬಿದ್ದರೆ ಚಿದಾನಂದನಿಗೆ ನಾಲಿಗೆ ತುರಿಸುತ್ತದೆ.

‘ಮೂಲತಃ ಯಾವ ಕಡೆಯೋರು ನೀವು? ಯಾವ ಡಿಪಾರ್ಟ್‌ಮೆಂಟಲ್ಲಿದೀರಿ?’ ಎನ್ನುವ ಪ್ರಶ್ನೆ ಬಾಯಿಂದ ಉದುರುತ್ತದೆ. ಮುಲಾಜು ಇದ್ದವರು ಉತ್ತರ ಕೊಡುವ ಸೌಜನ್ಯ ತೋರಿಸುತ್ತಾರೆ. ಇಲ್ಲದವರು, ‘ಅಯ್ಯೋ, ಎಷ್ಟು ಸಲ ಕೇಳಿದ್ದೇ ಕೇಳ್ತೀರಿ ತಾತ? ಮರೆತು ಹೋಗುತ್ತೆ ಅಂದ್ಮೇಲೆ ಬಿಟ್ಬಿಡಿ...’ ಅನ್ನುತ್ತಾರೆ.

‘ಮಾವ, ಬನ್ನಿ ಒಳಗೆ’ ಎನ್ನುವ ಕರೆ ಬರುತ್ತದೆ ಸೊಸೆಯಿಂದ. ಕಾಫಿಯ ಸುವಾಸನೆ ಮೂಗಿಗೆ ಬಡಿದಂತಾಗುತ್ತದೆ. ತಿಂಡಿ ತಿಂದ ಮೇಲೆ ಕಾಫಿ ಕುಡಿದಿಲ್ಲ ಅಂದುಕೊಳ್ಳುತ್ತಾ ಒಳಗೆ ಬಂದರೆ ಕಾಫಿ ಗೀಫಿ ಏನಿಲ್ಲ.

‘ತಿಂಡಿ ತಿಂದು ಅರ್ಧ ಗಂಟೆ ಆಯ್ತು. ಇನ್ನೂ ಕಾಫಿ ಇಲ್ವಾ?’ ಬಾಯ್ಬಿಟ್ಟು ಕೇಳುತ್ತಾನೆ ಚಿದಾನಂದ. ಅಷ್ಟು ಹಕ್ಕು ತನಗಿದೆ ಎಂದು ಅವನ ನಂಬಿಕೆ.

‘ಇದೊಳ್ಳೇ ಕತೆ ಆಯ್ತಲ್ಲ. ನೀವು ಕಾಫಿ ಕುಡಿದೇ ಹೊರಗಡೆ ಹೋಗಿದ್ದು’.

‘ಸುಳ್ಳೇ. ನಾನು ಕುಡಿದಿಲ್ಲ. ನೀನು ಕೊಟ್ಟಿಲ್ಲ ಕಣೇ’.

‘ನಾನೆಲ್ಲಿಂದ ಸಾಕ್ಷಿ ತರಲಪ್ಪಾ. ಇನ್ನೂ ಅಡುಗೆಮನೆ ಸಿಂಕಲ್ಲಿ ಕುಡಿದ ಲೋಟ ಬಿದ್ದಿದೆ ನೋಡಿ’.

‘ನಾನೇ ಕುಡಿದದ್ದು ಅಂತ ಗ್ಯಾರಂಟಿ ಏನು? ಆಯ್ತಪ್ಪಾ, ಇನ್ನೊಂದು ಸಲ ಕೊಟ್ರೆ ಗಂಟು ಕರಗುತ್ತಾ?’

‘ಅದೇ ಕೆಲಸ ಮಾಡ್ತಿರ್ತೀನಿ ನಾನು’ ಸಿಡುಕುತ್ತಾಳೆ